ದಿನಾಂಕಃ 19-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಪಿ ಎಸ್ ಬಿ ವಕೀಲರಿಂದ

ನಾನು ಟೈಲರ್ ಕೆಲಸ ಮಾಡುತ್ತೇನೆ. ನೀವು ಚಿಂತಾಮಣಿಯಲ್ಲಿ ಒಳ್ಳೆ ಟೈಲರ್ ಅಂತ ಹೆಸರು ತೆಗೆದುಕೊಂಡಿದ್ದೀರಿ ಎಂದರೆ ಒಳ್ಳೆ ಟೈಲರ್ ಅಲ್ಲಿ ನಾನು ಒಬ್ಬ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ 1. 4 ಎಕರೆ ಇದೆ. ಸಾಕ್ಷಿ ಮುಂದುವರಿದು ಅದು ಸರ್ವೆ ನಂ. 1/1, 1/2 ಆಗಿದೆ. ದಾವಾ ಸ್ವತ್ತಿನ ಸರ್ವೆ ನಂ. 1/2. ಸರ್ವೆ ನಂ. 1/2 ರಲ್ಲಿ ಮನೆಗಳು ಆಗಿವೆ ಎಂದರೆ ಸರಿ. ಪೂರ್ವಕ್ಕೆ ಇವೆ. ಆ ಮನೆಗಳು 40-50 ವರ್ಷಗಳಿಂದ ಇವೆ. ಸರ್ವೆ ನಂ. 1/2 ರಲ್ಲಿ ಸಮಾದಿಗಳು ಇಲ್ಲ ಎಂದರೆ ಇದೆ. ಸರ್ವೆ ನಂ. 1/2 ರಲ್ಲಿ ಯಾವುದೇ ಸ್ಮಶಾನ ಇಲ್ಲದಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 1/2 ಸರ್ವೆ ನಂ. 1/1 ರ ಪೂರ್ವಕ್ಕೆ ಬರುತ್ತದೆ ಎಂದರೆ 1/2 ರಲ್ಲಿ ಮನೆಗಳು ಆಗಿದೆ.

ಪ್ರತಿವಾದಿಯ ವಿರುದ್ದ ಜಿಲ್ಲಾ ರಿಜಿಸ್ಟ್ರಾರ್ ನಲ್ಲಿ ಅಂಡರ್ ವ್ಯಾಲ್ಯೂ ಮೇಲೆ ಅರ್ಜಿ ಹಾಕಿಸಿದ್ದೀರಿ ಎಂದರೆ ಸರಿ. ಪ್ರತಿವಾದಿ ತೆಗೆದುಕೊಂಡು ಕ್ರಯ ಪತ್ರದ ದಿನಾಕ ಗೊತ್ತಿರುವುದಿಲ್ಲ. ಶ್ರೀನಿವಾರವರ ಮೇಲೆ ಹಾಕಿರುವುದಿಲ್ಲ ನಾರಾಯಣರೆಡ್ಡಿ ರವರ ಮೇಲೆ ಹಾಕಿರುತ್ತೇನೆ. ದಿಃ19-09-2011 ರಂದು ಶ್ರೀನಿವಾಸ್, ಸಾಯಿ ಬಾಬಾ, ಸೈಯದ್ ಇಲಿಯಾಜ್ ಶಿವಣ್ಣ ಇವರು ಮೂರು ಜನ ಸರ್ವೆ ನಂ. 1/1 ರಲ್ಲಿ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು ನಾನು ಅವರ ಮೇಲೆ ದೂರು ದಾಖಲು ಮಾಡಿರುವುದಿಲ್ಲ. ಶ್ರೀನಿವಾಸ್ ಮತ್ತು ಉಳಿದ ಮೂರು ಜನರ ಮೇಲೆನೀವು ದೂರು ದಾಖಲು ಮಾಡಿರುತ್ತೀರಿ ಎಂದರೆ ಇಲ್ಲ ವೆಂಕಟರೆಡ್ಡಿ ಮತ್ತು ನಾರಾಯಣರೆಡ್ಡಿ ರವರ ಮೇಲೆ ದೂರು ದಾಖಲು ಮಾಡಿರುತ್ತೇನೆ. 2011-12 ರಲ್ಲಿ ಜಿಲ್ಲಾ ರಿಜಿಸ್ಟ್ರಾರ್ ನ ಮುಂದೆ ನಿಮ್ಮನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಇಲ್ಲ. ಜಿಲ್ಲಾ ರಿಜಿಸ್ಟ್ರಾರ್ ಮುಂದೆ ನೀವು ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಶ್ರೀನಿವಾಸ್ ರವರು ಖರೀದಿ ಮಾಡಿದ

ಮೇಲೆ ನಾನು ಅವರ ವಿರುದ್ಧ ದೂರು ನೀಡಿರುವುದಿಲ್ಲ ನ್ಯಾಯಾಲಯಕ್ಕೂ ಹೋಗಿರುವುದಿಲ್ಲ. ಶ್ರೀನಿವಾಸ್ ರವರು ಖರೀದಿ ಮಾಡಿದ ಮೇಲೆ ನಿಮ್ಮ ತಕರಾರು ಇಲ್ಲ ಎಂದರೆ ಸಾಕ್ಷಿಯು ನನ್ನದು ಯಾವುದೇ ವೈಯುಕ್ತಿಕ ತಕರಾರು ಇರುವುದಿಲ್ಲ. ನಿಮ್ಮ ಹೇಳಿಕೆ ಮತ್ತು ಇತರೆ ಸಹಚರರ ಹೇಳಿಕೆ ಮೇರೆಗೆ ಜಿಲ್ಲಾ ರಿಜಿಸ್ಟ್ರಾರ್ ರವರು ಶ್ರೀನಿವಾಸ್ ರವರ ಕ್ರಯ ಪತ್ರಕ್ಕೆ ಅಂಡರ್ ವ್ಯಾಲ್ಯೂ ಅಂತ ಹೇಳಿ ಆದೇಶ ಮಾಡಿರುತ್ತಾರೆ ಎಂದರೆ ಅಮ ಖರೀದಿ ಮಾಡಿದ ಆಸ್ತಿ ಮೇಲೆ ಅಲ್ಲ ಬೇಯವರ ಮೇಲೆ. ಡಬ್ಲ್ಯೂ ಪಿ ನಂ. 39539/2012 ಮತ್ತು 3946- 3948/2013 ರಂತೆ ರಿಟಲ್ ಅರ್ಜಿ ಗಳನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ರಿಟ್ ಅಪೀಲಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ರೀಜಿನಲ್ ಆಪೀಸ್ ಮುಂದೆ ಹಾಕಿಕೊಳ್ಳಬೇಕು ಎಂದರೆ ನನಗೆ ಗೊತ್ತಿಲ್ಲ. ರೀಜಿನಲ್ ಆಪೀಸ್ ನಲ್ಲಿ ಜಿಲ್ಲಾ ರಿಜಿಸ್ಟ್ರೇಷನ್ ರವರು ದುರುದ್ದೇಶಪೂರ್ವಕವಾಗಿ ಅಂಡರ್ ವ್ಯಾಲ್ಯೂ ಅಂತ ಆದೇಶ ಮಾಡಿರುತ್ತಾರೆ ಎಂದರೆ ನನ್ನ ಗಮನಕ್ಕೆ ಇರುವುದಿಲ್ಲ. ಆ ಎಲ್ಲಾ ಅರ್ಜಿಗಳು ನಡೆಯಲು ನೀವೇ ಕಾರಣರಾಗಿದ್ದು ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ನನಗೆ ಮಾಹಿತಿ ಇಲ್ಲ. ಶ್ರೀನಿವಾಸ್ ರವರ ವಿರುದ್ಧ ನಿಮಗೆ ದ್ವೇಷ ಇರುವುದರಿಂದ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಯಾವತ್ತಿಗೂ ವಾದಿಗಳು ಸ್ವಾ ಧೀನ ಇಲ್ಲ ಎಂದರೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.